<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u> ಶ್ರೀರಂಗಪಟ್ಟಣ.

ಸಿ.ಸಿ.ಃ 106/2016

ಪಿ ಡಬ್ಲ್ಯು 4

ಸಿ. ಡಬ್ಲ್ಯುಃ 2

ಸಾಕ್ಷಿದಾರರ ಹೆಸರು : ಸುಶೀಲಮ್ಮ

ತಂದೆ/ಪತಿಯ ಹೆಸರು : ಸಿದ್ದಪ್ಪಚಾರಿ

ವಯಸ್ಸು : 56 ವರ್ಷ

ವೃತ್ತಿ : ಅಂಗನವಾಡಿ ಯಲ್ಲಿ ಸಹಾಯಕಿ

ವಾಸ : ಮಹದೇವಪುರ

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ

29.11.2021

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಸುಮಾರು 6 ವರ್ಷಗಳ ಹಿಂದೆ ಬೆಳಿಗ್ಗೆ 09-30 ಗಂಟೆ ಸಮಯದಲ್ಲಿ ಮಹದೇವಪುರ ದಲ್ಲಿನ ಅಂಗನವಾಡಿಗೆ ನಾನು ಮಕ್ಕಳನ್ನು ಕರೆದುಕೊಂಡು ಹೋಗಿದೆ. ನಾನು ಅಲ್ಲಿಗೆ ಹೋದಾಗ ಅಂಗನವಾಡಿಯ ಬಾಗಿಲಿನ ಬೀಗ ಮುರಿದಿತ್ತು ಮತ್ತು ಬಾಗಿಲು ತೆರೆದಿತ್ತು . ಒಳಗೆ ಹೋಗಿ ನೋಡಿದಾಗ ಅಲಿದ್ದ ಆಹಾರ ಸಾ ಮಗ್ರಿಗಳನ್ನು ಕದ್ದು ಕೊಂಡು ಹೋಗಿದ್ದರು. ಕಳ್ಳತನ ವಾಗಿದ್ದ ಬಗ್ಗೆ ಗ್ರಾಮಪಂಚಾಯಿತಿ ಅಧ್ಯಕ್ಷರಾದ ಕಾಳೇಗೌಡರವರಿಗೆ ಹಾಗೂ ಗಿಣೆ ಸ್ವಾಮಿ ಎನುವವರಿಗೆ ತಿಳಿಸಿದೆನು.

(ಈ ಹಂತದಲ್ಲಿ ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶಹಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಹಾಗೂ ಪಾಟಿ ಸವಾಲು ನಡೆಸಲು ಅನುಮತಿ ಕೋರಿದ್ದು ಅನುಮತಿಸಲಾಗಿದೆ)

**ಪಾಟಿ ಸವಾಲು ಮಾನ್ಯ ಸಸಅ ರವರಿಂದ**

ದಿಃ04.08.2015 ರಂದು ಬೆಳಿಗ್ಗೆ ನಾನು ಅಂಗನವಾಡಿಗೆ ಕೆಲಸಕ್ಕೆ ಹೋಗಿದ್ದಾಗ ಅಂಗನವಾಡಿಯ ಬಾಗಿಲು ಮುರಿದಿತ್ತು ಎಂದರೆ ನಿಜ. ಈ ವಿಚಾರವನ್ನು ಅಂಗನವಾಡಿ ಕಾರ್ಯಕತ್ಯೆ ಯಾದ ಲಕ್ಷ್ಮಿ ಯವರಿಗೆ ತಿಳಿಸಿದೆನು ಎಂದರೆ ಸರಿ . ಕಳ್ಳತನದ ವಿಚಾರವನ್ನು ಗ್ರಾಮಂಚಾಯಿತಿ ಅಧ್ಯಕ್ಷರಾದ ಜಗದೀಶ್ ಮತ್ತು ಪಿಡಿಒ ರಾಜ್ ಶೇಖರ್

ರವರಿಗೆ ತಿಳಿಸಿದ್ದೆ ಎಂದರೆ ಸರಿಯಲ್ಲ . ಆಹಾರ ಸಾಮಗ್ರಿಗಳ ಜೊತೆಗೆ ಅಂಗನವಾಡಿಯಲ್ಲಿ ಸಿಲಿಂಡರ್ ಸಹ ಕಳ್ಳತನ ವಾಗಿತ್ತು ಎಂದರೆ ನಿಜ. ಕಳ್ಳತನವಾದ ವಿಚಾರಕ್ಕೆ ಲಕ್ಷ್ಮಿ ರವರು ಪೋಲೀಸ್ ಠಾಣೆಗೆ ದೂರು ನೀಡಿದ್ದರು ಎಂದರೆ ನಿಜ.

ಪಾಟಿ ಸವಾಲು ಮಾನ್ಯ ಆರೋಪಿ ಪರ ವಕೀಲರಿಂದ ಎನು ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.